೧೦. ಅಂಗದ ಸಂಧಾನ

ಸೌರಾಷ್ಟ್ರ : ತ್ರಿವುಡೆ

ಗಿರಿ ಸುವೇಲದೊಳಿಂತು ರಾಘವ । ವಿಗದ ವಾನರವೃಂದದೊಡನಿರೆ । ಬಗೆಯರಿತು ಸುಗ್ರೀವ ಪೇಳಿದ । ಒಗುಮಿಗೆಯೊಳು ॥ ೧ ॥ ಮುಂದುವರಿದಾ ಲಂಕೆಯರಸನ । ನಿಂದು ತುಡುಕಿದೆ ದ್ವಂದ್ವಕಲಹದಿ । ಮಂದಮತಿಯಾ ಖಳನ ಮಕುಟವ । ಭಂಗಗೈದೆ ॥ ೨ ॥ ನಳಿನಸಖಸುತ ಕೇಳು ದುಡುಕಿನ । ಕಲಹದೆತ್ನ ವಿದೇಕೆ ನಮಗಿದು । ಕಳವಳಕೆ ಕಾರಣವು ಯೋಚಿಸಿ । ಅಳವಿಗೈವ ॥ ೩ ॥

ಕೇದಾರಗೌಳ : ಅಷ್ಟ

ಆ ಸಮಯದಲಿ । ವಾಲಿಸುತ ಪಿಡಿತಂದ । ನಾಸುರರೀರ್ವರನು ॥ ದಾಶರಥಿಯ ಕಂಡು ಮಣಿದು ಬಿನ್ನೈಸಿದ । ಮೋಸದ ಹದನವನು ॥ ೧ ॥ ದುರುಳರೀರ್ವರು ರೂಪು ಮರೆಸಿ ಬಂದಿಹರೈಸೆ । ಅರಿಯಲು ನಮ್ಮೊಳವ ॥ ಪರಿಚಯವಾಯ್ತು ವಿಭೀಷಣನಿಂದಲಿ । ತರಿದೊಡ್ಡಬೇಕಿವರ ॥ ೨ ॥ ಕಿರುನಗೆಗೂಡಿ ರಾಘವ ರಕ್ಕಸರೊಳೆಂದ । ಮರೆಸಿ ರೂಪವ ಜವದಿ ॥ ಪರಿತಂದು ಮೋಸವ ಜಾಲ ಒಡ್ಡಿದಿರೇಕೆ । ದೊರೆವುದೇನಿದರಿಂದಲಿ ॥ ೩ ॥

ಶಂಕರಾಭರಣ : ಏಕ

ಚಕಿತನಾಗದಿರು ನಮ್ಮಯ ಯುಕುತಿಯ । ಪ್ರಕಟಿಸಿದಬ್ಬರಕೆ ॥ ಶುಕ ಸಾರಣರೆಂದೆಮ್ಮನು ಕರೆವರು । ಅಕಳಂಕರು ಜಗಕೆ ॥ ೧ ॥ ದನುಜಾಧಿಪ ದಶಕಂಠನ ಸೇವೆಯ । ಅನುಕರಿಸಿಹೆವಯ್ಯ ॥ ವನಚರರೊಂದಿಗೆ ನೀ ಬಂದಿಹುದರಿ । ತಣಿಗೈದೆವು ಮತಿಯ ॥ ೨ ॥ ಹರನ ಗಿರಿಯನೆತ್ತಿದ ರಾವಣನೊಳು । ಧುರವೇತಕೊ ನಿನಗೆ ॥ ಶರಧಿಗೆ ಕಲ್ಲೊಗೆದಂತಾಯಿತು ಸಾ । ಕರಿತು ತಿರುಗು ಮನೆಗೆ ॥ ೩ ॥ ತುಂಗ ಬಲಾನ್ವಿತ ರಕ್ಕಸರಿಂಗೀ । ಮಂಗಗಳಿದಿರಹವೆ ॥ ಸಂಗರಕೆತ್ನಿಸದಿರು ನೀ ಸುಮ್ಮನೆ । ಭಂಗವನೇ ಪಡೆವೆ ॥ ೪ ॥ ಅವಗುಣವಿದು ಸೀತೆಯ ಕಾಮಿಸಿ ಸಹ । ಭವನನು ತ್ಯಜಿಸಿದುದು ॥ ಕವಿದೀ ದೋಷವ ತೊರೆದರೆ ರಾವಣ । ಗವನಿಯೊಳಿದಿರ್ಯಾರು ॥ ೫ ॥

ಸುರುಟಿ : ಮಟ್ಟೆ

ದುಷ್ಟರಿವರನು । ಬಡಿದು । ಮೆಟ್ಟಿ ಕೊಲುವೆನು । ಕೆಟ್ಟಮಾತ ನುಡಿಯುತಿರುವರೆಂದ ರವಿಜನು ॥ ೧ ॥ ಹೆಮ್ಮೆಯಿಂದಲಿ । ಖಳರು । ನಮ್ಮ ಜರೆದರೈ॥ ಮರ್ಯಾದರನು ಉಳಿಸಬಾರದೆಂದನಂಗದ ॥ ೨ ॥

ಕಾಂಭೋದಿ : ಝಂಪೆ

ವಾನರಾಗ್ರಣಿಗಳಿಂತೇಕೆ ಮುಳಿವಿರಿ ಮನದಿ । ದಾನವರ ಗುಣ ಪ್ರಕಟ ವಾಯ್ತು ॥ ಮಾನಸದಿ ತವೊಡೆಯನನು ನೆಚ್ಚಿ ಹೊಗಳಿದರು । ಹೀನರಿವರಲ್ಲ ಮತಿಯುತರು ॥ ೧ ॥ ಶುಕಸಾರಣರೆ ನಿಮ್ಮ ಯುಕುತಿ ಫಲ ಕೊಡದಿಲ್ಲಿ । ಶಕುತ ನಿಮ್ಮೊಡೆಯನಿಗೆ ತಿಳುಹಿ ॥ ಸಕಲ ಸಂಗತಿಯ ಸುವಿವೇಚನೆಗೆ ನಾನೋರ್ವ ಆಕುಟಿಲನ ಕಳುಹಿಸುವೆ ಜವದಿ ॥ ೨ ॥ ಸಾಮಕೊಪ್ಪದೆ ಇರಲು ಸಾಮರ್ಥ್ಯ ಕಾಣಿಸುವ । ನೇಮಕೊಲಿದಿಹ ರಾಮನೆಂದು ॥ ಯಾಮಿನೀಚರರೊಡೆಯ ಗರುಹಿ ನೀವೆಂದೆನುತ । ತಾ ಮನ್ನಿಸುತ ಕಳುಹಲವರ ॥ ೩ ॥

ಭಾಮಿನಿ : ಅರ್ಧ

ದನುಜಪತಿಯೋಲಗಕೆ ಶುಕ ಸಾ । ರಣರು ತಾವಯ್ತಂದು ವಿನಯದಿ । ಮಣಿದು ನಿಂತಿರೆ ಕಂಡು ನುಡಿಸಿದನವರ ದಶವದನ ॥

ಮಧುಮಾಧವಿ : ಏಕ

ವಾನರ ಬಲವನ್ನು ನೋಡಿದಿರೇನು । ಏನು ವೈಶಿಷ್ಟ್ಯವುಂಟರುಹಿರಿ ಅದನು ॥ ಮಾನವ ರಾಮ ತಾನೆಂತಿರ್ಪ ಹೇಳಿ । ಜಾಣರೆ ನೀವೇನ ತಿಳಿದು ಬಂದಿಹಿರಿ ॥ ೧ ॥ ಈ ವಿಭೀಷಣನೆಂತು ಕೂಡಿಕೊಂಡಿಹನು । ಈ ವರೆಗವರು ಯೋಚಿಸಿಕೊಂಡುದೇನು ॥ ಭಾವಿಸೆ ಸುಗ್ರೀವಾಂಗದರಿನ್ನೆಂತಿಹರು । ಸಾವಧಾನದಿ ಸಂಗತಿಯ ಪೇಳಿ ಮೊದಲು ॥ ೨ ॥

ಶಂಕರಾಭರಣ : ಅಷ್ಟ

ಲಾಲಿಸು । ಮಾತ । ಲಾಲಿಸು ॥ ಪ ॥ ಮೇಲಾದ ವಿವರವ ಪೇಳುವೆವೆಲ್ಲವ ॥ ಅ. ಪಲ್ಲ ॥ ಮರೆಸಿ ರೂಪವನು ನಾವಿಲ್ಲಿಂದ ಪೋದೆವು । ತರುಚರ ನಿವಹವ ಪರಿಕಿಸಿ । ಭೇದ । ವಿರಚಿಸಲೆತ್ನವ ಸೃಷ್ಟಿಸಿ । ಮಾತ । ಮೆರೆಸುತಲಿರೆ ನಮ್ಮ ಗುರುತಿಸಿ । ರಾಮ । ನಿರುವೆಡೆಗೆಳೆತರೆ ಪೀಡಿಸಿ ಮುಂದೆ ನಿಲ್ಲಿಸಿ ಕುಂದ ಸೂಚಿಸಿ । ಶಿರಪರಿವೆ ವೆಂದೆನಲಾತನೊಪ್ಪದೆ ನಮ್ಮನು । ಕರುಣೆಯಿಂದಲಿ ನೋಡಿ ಮನ್ನಿಸಿ ಕಳುಹಿದ ॥ ೧ ॥ ಎಣಿಕೆಗೆಪ್ಪತ್ತೇಳು ಕೋಟಿ ಮಾರ್ಬಲವಿದೆ । ಘನ ವರಾನ್ವಿತರಂತೆ ಕಪಿಗಳು । ಸೇತುವನೆ ಗೈದು ಮುಂದೈತಂದಿರುವರು ॥ ರಾಘ । ವನ ನೇಮವನು ಮಿಕ್ಕಿ ನಡೆಯರು । ಮುಂದೇ ರಣ ಒದಗಲು ನಮ್ಮ ಗಣಿಸರು । ಸಿದ್ಧರಿರ್ಪರು ಬದ್ಧ ವೀರರು । ಮುಂದೆ । ದನುಜ ಸಂದಣಿಯ ನಿರ್ನಾಮವಾಗುವದಯ್ಯ । ಅನುವರಿತವರನ್ನು ಮನ್ನಿಸು ಖಳರಾಯ ॥ ೨ ॥

ಕೇದಾರಗೌಳ : ಝಂಪೆ

ಕಪಿಗಳನು ನೋಡಿ ಬೆದರಿ । ಬಂದಿಲ್ಲಿ । ಉಪದೇಶ ಗೈಯ್ಯುತಿಹಿರಿ ॥ ಅಪಹಾಸ್ಯವಿದು ಖಳರಿಗೆ । ಸಾಕು ಬಲು । ನಿಪುಣರೆಂದರಿತೆ ಹೀಗೆ ॥ ೧ ॥

ಮೂರುಲೋಕವೆ ಮುನಿದರು । ರಾವಣನ । ಶೌರ್ಯಕಿದಿರಪ್ಪರ್ಯಾರು ॥ ಧೀರ ದನುಜರನೆದುರಿಸಿ । ಗೆಲ್ಲುವನೆ । ಆ ರಾಮ ಧುರವ ಬಯಸಿ ॥೨॥ ರಮಣಿ ಸೀತೆಯ ಮೋಹದಿ । ಬರಿದೆ ವಿ । ಭ್ರಮೆಯಾಂತು ಬಂದನಿಲ್ಲಿ ॥ ಕುಮತಿ ಕಪಿಗಳ ಕೂಡುತ । ಸಾಯುವನು । ಸಮರಕಿನ್ನಿದಿರಾಗುತ ॥ ೩ ॥

ಭಾಮಿನಿ

ಹುಲುಮನುಜನವನಿಂಗೆ ಮಣಿವೆನೆ । ಖಳಕುಲೇಶ್ವರ ನಾನೆಸುತ್ತಲಿ । ಬಲುಹಿನಿಂದಾರ್ಭಟಿಸಿ ರಾವಣನಿರಲು ಲಂಕೆಯಲಿ ॥ ಕಲಹಕಾತುರಗೊಂಡ ಕಪಿ ಗಳ । ಬಳಗವನು ಪರಿಕಿಸುತ ರಾಮನು । ಜಲಜಬಾಂಧವ ಜಾತಗೆಂದನು ನಿಯಮ ನಿಷ್ಠೆಯಲಿ ॥ ೧ ॥

ಪೀಲು : ಅಷ್ಟ

ವೀರವಿಕ್ರಮಿಗಳೆಲ್ಲರು ಕೇಳಿ ನುಡಿಯ । ಹೋರಾಟವೆ ನಮ್ಮ ಗುರಿ ಯಲ್ಲವಯ್ಯ ॥ ಚಾರು ಸಂಧಾನಕೆತ್ನಿಸಬೇಕು ಮೊದಲು । ಸಾರ ನೀತಿಯ ಮೀರ ಬಾರದು ತಿಳಿದು ॥ ೧ ॥ ಸೀತೆಯ ತಂದ ತಪ್ಪಿಗೆ ಕ್ಷಮೆ ಕೇಳಿ । ನೀತಿಯೊಳೊಪ್ಪಿಸಿ ಬಾಳಿಕೊಂಡಿರಲಿ । ರೀತಿಗೊಪ್ಪಲು ವೈರವಿಲ್ಲೆಂಬ ಬಗೆಯ । ದೈತ್ಯೇಶನಿಗೆ ಸೂಚಿ ಪುದು ಯೋಗ್ಯವಯ್ಯ ॥ ೨ ॥ ವಾಲಿಯೊಳತಿ ಮೈತ್ರಿಯಿತ್ತು ರಾವಣಗೆ । ಬಾಲ ನಂಗದ ಹೋಗಿ ಬರಲಿ ಈ ಬಗೆಗೆ ॥ ಪೇಳಲಿ ಸಾಮದ ನುಡಿಯ ಸಕ್ರಮದಿ । ಕೇಳದಿದ್ದೊಡೆ ಯುದ್ಧಗೈವ ಸತ್ವದಲಿ ॥ ೩ ॥

ಸುರುಟಿ : ಏಕ

ವಿನಯದೊಳಂಗದನು । ಪೇಳಿದ । ವಿನಯದೊಳೈದುವೆನು ॥ ದನುಜಗೆ ಸಾಮವಿಚಾರವ ಪೇಳುವೆ । ಮನತರದಿರಲೇನ್ಗೈವುದು ಪೇಳೈ ॥ ೧ ॥ ಸಿಡಿಲು ಮರಿಯು ನೀನು । ಸಹಿಸಿಕೊ ಸಿಡುಕಲು ಬೇಡಿನ್ನು ॥ ಒಡಬಡಿಸುತಲಿ ವಿವೇಕವ ಸೂಚಿಸು । ಕಡೆಗಣಿಸಲು ಸುಮ್ಮನೆ ಬಾ ಹಿಂದಕೆ ॥ ೨ ॥ ಶ್ರೀರಾಮಗೆ ನಮಿಸಿ । ಪೊರಟನು । ತಾರಾಸುತ ಗ್ರಹಿಸಿ ॥ ಹಾರಿದ ಲಂಕಾಪಟ್ಟಣಕಾಕ್ಷಣ । ಊರ ನಿರೀ ಕ್ಷಿಸುತೋಲಗಕೈತರೆ ॥ ೩ ॥

ಸೌರಾಷ್ಟ್ರ : ತ್ರಿವುಡೆ

ದಾನವೇಶನ ಸಭೆಯಿದಮಮ । ಏನು ಸಡಗರ ಸಂಭ್ರಮ ॥ ಕಾಣಲಮಿತ ವಿಚಿತ್ರವೇಷದ । ಕೌಣಪರ ಸಂದರ್ಶನ ॥ ೧ ॥ ಭುವನದಲ್ಲಣರಹುದು ರಕ್ಕಸ । ರಿವರು ತಾಮಸ ತಿಳಿಯುತ ॥ ಕವಿಸಿದರು ಸಂಕಟವ ನೀತಿಯ । ಹವಣವನು ಧಿಕ್ಕ ರಿಸುತ ॥ ೨ ॥ ನೋಡುತಣಕಿಪರಹಹ ಮನ್ನಣೆ । ನೀಡರೀ ದಿತಿಜಾತರು ॥ ಜೋಡಿ ಸುತ ವಾಲಾಸನದಿ ಕುಳಿ । ತೇರಿ ಮೆರೆಯುವೆನಿದಿರೊಳು ॥ ೩ ॥ ರಾವಣನ ಸಮ್ಮು ಖದಿ ವಾಲಿಜ । ಠೀವಿಯಿಂ ಮಂಡಿಸಿದುದ ॥ ತಾ ವಲಿದು ಪರಿಕಿಸಿ ಪ್ರಹಸ್ತನು । ಸಾವರಿಸಿ ಪರಿ ಕೇಳಿದ ॥ ೪ ॥

ಮಧ್ಯಮಾವತಿ : ಆದಿ

ಬಂದುದೆಲ್ಲಿಂದ ವಾನರ ನೀನು । ಮದ । ದಿಂದ ವರ್ತಿಸಿದ ಕಾರಣವೇನು । ಮಂದಮತಿ ಇದೇಕೆ ಪೇಳು ಬೇಗ । ಖಳ । ವೃಂದವ ನೋಡಿ ವಿಭ್ರಮಿಸ ಬೇಡ ॥ ೧ ॥ ಸಂಧಾನಕೆಂದಿಲ್ಲಿ ಬಂದೆ ನಾನು । ರಾಮ । ಚಂದ್ರನಾಣತಿಯಂತೆ ನಡೆಯುವೆನು ॥ ಮುಂದಿನ್ನೋಚನೆಯ ನೀವ್ ಮಾಡದಿಂತು । ಗರ್ವ । ದಿಂದ ವರ್ತಿಸಿ ಕೇಡು ಕೂಡಿ ಬಂತು ॥ ೨ ॥ ರಾಯಭಾರಕೆ ಬಂದೆ ಕಪಿಯೆ ನೀನು । ಕಾರ್ಯ । ದಾಯವರಿಯುವಂಥ ಜ್ಞಾನಿಯೇನು ॥ ನ್ಯಾಯವ ಮರೆತು ಆ ರಾಮ ನಿಂತು । ನಿನ್ನ । ಈ ಎಡೆಗಟ್ಟಿದುದಣಕವಾಯ್ತು ॥ ೩ ॥ ಗುಪಿತದಿ ಪರರ ವಸ್ತುವ ಕಳುವ । ನಿಮ್ಮ । ಕಪಟ ಕೃತ್ಯವ ರಘುವರ ತಿಳಿದ ॥ ಚಪಲ ಚಿತ್ತಕೆ ನ್ಯಾಯ ತಿಳಿವುದೇನೊ । ಬಲು । ನಿಪುಣತೆಯನು ತೋರ್ಪೆ ಮಂತ್ರಿಯೇನೊ ॥ ೪ ॥

ಕೇದಾರಗೌಳ : ಅಷ್ಟ

ಜಾಣ ನೀನಹುದು ನಿನ್ನಯ ಮೂಲವೆಲ್ಲವ । ಸಾನುರಾಗದಲಿ ಪೇಳು ॥ ದಾನವರೋಲಗಕೈತಂದ ಹದನವಿ । ದೇನೆನುತಲಿ ತಿಳುಹು ॥ ೧ ॥ ಕೇಳಿಬಲ್ಲೆಯ ನೀ ಕಿಷ್ಕಿಂಧೆಯನಾಳಿದ । ವಾಲಿಯ ಚರಿತೆಯನು ॥ ಬಾಲನಾತನಿಗೆ ನಾನಂಗದ ನೆಂಬರು । ಶ್ರೀಲಲಾಮಗೆ ದಾಸನು ॥ ೨ ॥ ಬಲು ತೋಷವಾಯ್ತು ನೀನೆಮಗತಿ ಹಿತನಾದೆ । ಬಲವಂತಿಕೆಯಿದಲ್ಲವು ॥ ಚಳಕಕೆ ಬಲಿಯಾದ ವಾಲಿ ಎಂಬುದ ಕೇಳಿ । ಕಳವಳ ತಾಳಿರ್ದೆವು ॥ ೩ ॥ ಮದದಿಂದ ಮೆರೆದು ಧರ್ಮವ ಮೀರಿದುದರಿಂದ । ಒದಗಿತೀ ಗತಿ ಎನ್ನುತ ॥ ವಿಧಿಯನರಿತು ತಂದೆ ಮೃತಿಯಾಂತ ರಾಮನ । ಪದವನು ಧ್ಯಾನಿಸುತ ॥ ೪ ॥

ಸಾಂಗತ್ಯ : ರೂಪಕ

ಯೋಚಿಸಲೀಗ ಕಿಷ್ಕಿಂಧಾ ಸಾಮ್ರಾಜವ । ದೋಚಿದ ಸುಗ್ರೀವನಕಟ ॥ ನೀಚನಾತನನು ನೀ ಸೇರಿ ಬಾಳುವದೇಕೆ । ಯೋಚಿಸೆ ನೀ ಸೌಖ್ಯ ಪಡೆವೆ ॥ ೧ ॥ ಪರಮಾತ್ಮ ಶ್ರೀರಾಮಚಂದ್ರನ ಸೇವೆಯು । ದೊರೆತುದೆ ಪರಮ ಸೌಭಾಗ್ಯ ॥ ದುರುಳ ವೃತ್ತಿಯ ಗೈದ ರಾವಣನೆಲ್ಲಿರ್ಪ । ಪರಿಕಿಪೆನವನ ತೋರಯ್ಯ ॥ ೨ ॥ ಹುಡುಗ ನೀನರಿಯೆ ರಾಮನ ತಂತ್ರದೊಳವನ್ನು । ಕೆಡಬೇಡ ದಾಸ್ಯದೊಳಿಂತು ॥ ಕಡುಗಲಿ ರಾವಣೇಶ್ವರನ ಮನ್ನಿಸಿ ರಾಜ್ಯ । ಪಡೆದಾಳು ವೈಭವವಾಂತು ॥ ೩ ॥ ಸೀತೆಯನಪಹಾರಗೈದ ರಕ್ಕಸನಿಂಗೆ । ಮಾತೊಂದ ತಿಳುಹುವದುಂಟು ॥ ಯಾತು ಧಾನರ ಸಾಲಿನೊಳಗಾತನ್ಯಾರೆಂದು । ಭೀತಿ ಇಲ್ಲದೆ ತೋರಬೇಕು ॥ ೪ ॥

ಕೇದಾರಗೌಳ : ಝಂಪೆ

ಪಸುಳೆ ನೀನಹುದು ಶೋಭಿಸುವ ದಶವದನದಲಿ । ಶಶಿಹಾಸ ಧರಿಸಿ ಸಮ್ಮುಖದಿ ॥ ಅಸುರೇಶನೊಪ್ಪಿರುವನವನ ಗುರುತಿಸದಾದೆ । ಕುಶಲ ಮತಿ ಮಸಳಿಸಿತೆ ನಿನಗೆ ॥ ೧ ॥ ಬಲಿ ಕಾರ್ತವೀರ್ಯ ವಾಲಿಯರ ವಿಕ್ರಮದಿರಕೆ ।

ತಲೆಬಾಗಿ ಬದುಕಿ ಬಂದಿರುವ । ಖಳರಾಜಸೀತಸೀ ಕಂಡೆ ನಾಸಿವಸನುವ । ಬಳಗ ದವರಿಂಗೀತ ಗಣ್ಯ ॥ ೨ ॥ ಶಿವನನೇ ಮೆಚ್ಚಿಸಿದ ದಿವಿಜ ಸಂಪದ ಪಡೆದ । ಬವರ ವಿಕ್ರಮಿಯು ದನುಜೇಂದ್ರ ॥ ವಿವರವರಿಯದೆ ಕುಂದನೆಣಿಸಿ ನಿಂದಿಸಬೇಡ । ತವಕದಿಂದೆರಗು ನಯದಿಂದ ॥ ೩ ॥ ಸುದತಿಯುರ ಕೆಣಕಿ ಪೀಡೆಯನೀವ ದುರ್ಮ ತಿಯು । ವದನ ನೋಡುವುದೆ ಬಹುಪಾಪ ॥ ಮೊದಲು ಸಾಮದ ಮಾತ ಪೇಳಿ ನಾನೊಳವರಿತು । ವಿಧಿಯ ಮನ್ನಿಸಲವಗೆ ಮಣಿವೆ ॥ ೪ ॥

ನಾದನಾಮಕ್ರಿಯೆ : ಏಕ

ಸಾಮಗಾನ ನಿಪುಣ ನೀನು ರಾವಣೇಶ್ವರ । ಸಾಮದೊಂದು ಮಾತ ನರಿತು ಕೇಳಬೇಕಯ್ಯ ॥ ನೇಮದಿಂದ ವೇದವೋದಿ ದೋಷ ಗೈವೆಯ । ಕಾಮ ಕಾಗಿ ಶೀಲವನ್ನು ಹೋಮ ಗೈವೆಯ ॥ ೧ ॥ ನೀತಿಯನ್ನು ತಿಳಿದು ರಾಮ ನೊಡನೆ ಕೂಡಿಕೊ । ಸೀತೆಯನ್ನು ಮರಳಿ ನೀಡು ಕ್ಷಮೆಯ ಕೇಳಿಕೊ ॥ ರೀತಿಯರಿತು ಬದುಕಿ ಜಗದಿ ಶ್ರೇಷ್ಠ ನೆನಿಸದೆ । ಖ್ಯಾತಿಯಿಂದ ಕುಲದ ಕೊಲೆಯ ಗೈವುದೇತಕೆ ॥ ೨ ॥

ಸೌರಾಷ್ಟ್ರ : ತ್ರಿವುಡೆ

ಸಾಕೆಲೋ । ಬೋಧೆಯಿ । ದೇಕೆಲೊ ॥ ಕಾಕು ಕಪಿ ನೀ ಬಂದು ಬಹಳ ವಿವೇಕಿಯಂದದಿ ಗಳಹುತಿರ್ಪೆಯ ॥ ಪ ॥ ಬಾಹುಬಲದಿಂ ರಜತ ಗಿರಿಯನೆ ಕದಲಿಸಿದೆ ನಾ ಸತ್ವದಿ । ಸಾಹಸದಿ ಮೂಲೋಕದಲ್ಲಣ ನೆನಿಸಿರುವೆ ರಣಕೃತ್ಯದಿ ॥ ದೇಹಬಲಕಿದಿರಿಲ್ಲ ಬುದ್ಧಿಯೊಳಪ್ರತಿಮ ನಾನೆನಿಸಿದೆ । ಸ್ನೇಹವೇ ಹುಲು ಮನುಜನೊಳು ಮಾರಾಂತು ಬಂದುದ ನೋಡುವೆ ॥ ೧ ॥ ನಮ್ಮ ಸಖನಾ ವಾಲಿಯೆಂಬುದಕೊಮ್ಮೆ ಮಾತನು ಸಹಿಸಿದೆ । ಹೆಮ್ಮೆಯಿದು ಲೇಸಲ್ಲ ಹರಟದೆ ಹೊರಡು ನೀ ಸುಕ್ಷೇಮದಿ ॥ ಧರ್ಮವ್ಯಾಖ್ಯೆಯ ಪಟ್ಟಕೇರುವ ಬಯಕೆ ಬೇಡೆಲೊ ಮರ್ಕಟ । ಸುಮ್ಮನಿಲ್ಲಿಂ ತೊಲಗು ಸಭೆಯನು ಕೆಡಿಸುತಿಹೆ ನೀನಕ್ಕಟ ॥ ೨ ॥

ಭೈರವಿ : ಅಷ್ಟ

ಬರಿದೆ ಕೋಪಿಸಬೇಡವೋ ರಾವಣ ನೀನು । ಪರಿಯ ಯೋಚಿಸಿ ನೋಡೆಲೋ ॥ ಪರಸತಿ ಪರಧನಕಳುಪಿ ವರ್ತಿಸುವದು । ಮರಣ ಸಂಗತ ವಪ್ಪುದು ॥ ೧ ॥ ಮರದಿಂದ ಮರ ಹುಡುಕಿ । ಹಾರುತ ಹಲ್ಲ । ಕಿರಿದು ಹಣ್ಣಸು ತುಡುಕಿ ॥ ಪರಿ ಪರಿ ಚೇಷ್ಟೆಯ ಮೆರೆಸಿದಂತಲ್ಲಿದು । ತೆರಳಲೊ ಪಥವರಸಿ ॥ ೨ ॥ ಕಪಟದಿ ಹೆಣ್ಣ ತಂದು । ಶ್ರೀರಾಮಗೆ । ಉಪಟಳವಿತ್ತೆಯೆಂದು ॥ ಉಪದೇಶ ವಿತ್ತೆನು ತಲೆಗೇರ್ದ ಮದದಿಂದ ವಿಪರೀತ ಕೆಡುಕಹುದು ॥ ೩ ॥ ಹಿಡಿಯಿರೊ ಈ ಮಂಗನ । ಬಾಲವನೀಗ । ಕಡಿಯಿರೊ ರಘುವೀರನ । ಕಡೆಯಿಂದ ಬಿಡಿಸಲು ಬರುವರ್ಯಾರೆಂಬುದ । ಕಡೆಗೆ ನೋಡುವ ಹದನ ॥ ೪ ॥ ಬಾಲಕೆ ಬೆಂಕಿಯಿಟ್ಟು ।

ಲಂಕೆಯನಗ್ನಿ । ಜ್ವಾಲೆಗಾಹುತಿಯ ಕೊಟ್ಟು । ಮೇಲೆನಿಸಿದ ಮತಿವಂತಿಕೆ ತೋರಲು । ಕಾಳಗಕಿಂಬಹುದು ॥ ೫ ॥ ಸುತ್ತುವರಿದ ಖಳರಾ । ತನ್ನಯ ತೋಳ । ಸತ್ವದಿ ಬಡಿದವರಾ ॥ ಎತ್ತರಕಿಹ ಸಭಾಗೃಹದ ಕಳಶವನ್ನು ಕಿತ್ತೆಸೆಯುತ ಬಂದನು ॥ ೬ ॥

ಭಾಮಿನಿ

ವಿಗಡನಂಗದ ನಿಂತು ಮೆರೆಯುವ । ಬಗೆಯರಿತು ಹನುಮಂತನಾತನ । ರಘುವರನ ಸನ್ನಿಧಿಗೆ ತಾ ಕರೆದೊಯ್ದು ಸಂತೈಸಿ ॥ ಸುಗುಣ ಸಂಧಾನಕ್ಕೆ ಮಣಿಯದೆ । ಮೊಗದಿರುಹಿದಸುರನನು ಮರ್ದಿಸೆ । ಪಗಲೊಡೆಯ ಕುಲತಿಲಕ ಯೋಚಿಸುತಿರ್ದ ಬಲಸಹಿತ ॥ ೧ ॥